KAUK620013032025

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ**

**-: ಉಪಸ್ಥಿತರು :-**

**ಶ್ರೀ ಈರಣ್ಣ ಹುಣಶಿಕಟ್ಟಿ.,**
**ಬಿ.ಕಾಂ.,ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಮ್.ಎಫ್.ಸಿ., ಹೊನ್ನಾವರ.**

**ದಿನಾಂಕ 16 ನೇ ಸೆಪ್ಟೆಂಬರ್ ಮಾಹೆಯ 2025 ನೇ ಇಸವಿ.**

**ಮೂಲ ದಾವಾ ಸಂಖ್ಯೆ- 49/2025.**

**ವಾದಿಯರು :-** 1. **ಶಂಭು ಈಶ್ವರ ಗೌಡ,**
ವಯಸ್ಸು ಸುಮಾರುಃ- 60 ವರ್ಷ,
ಉದ್ಯೋಗಃ- ರೈತಾಬಿ,
ಸಾಕೀನಃ- ಕೆಳಗಿನೂರು, ಕೇರೆಕೊಡು,
ತಾಲೂಕುಃ- ಹೊನ್ನಾವರ (ಉ.ಕ).

2. **ಕನ್ಯಾ ಈಶ್ವರ ಗೌಡ,**
ವಯಸ್ಸು ಸುಮಾರುಃ- 56 ವರ್ಷ,
ಉದ್ಯೋಗಃ- ರೈತಾಬಿ,
ಸಾಕೀನಃ- ಕೆಳಗಿನೂರು, ಕೇರೆಕೊಡು,
ತಾಲೂಕುಃ- ಹೊನ್ನಾವರ (ಉ.ಕ).

**(ವಾದಿಯ ಪರವಾಗಿ ಶ್ರೀ ಆರ್.ಎಮ್.ಬಿ., ವಕೀಲರು)**

**-ವಿರುದ್ಧ-**

**ಪ್ರತಿವಾದಿಯರು :-** **ಮಂಜು ಗೋವಿಂದ ಗೌಡ,**
ವಯಸ್ಸು ಸುಮಾರುಃ- 65 ವರ್ಷ,

ಸಾಕೀನಃ– ಕೆಳಗಿನೂರು, ಕೇರೆಕೊಡು,

ತಾಲೂಕುಃ– ಹೊನ್ನಾವರ (ಉ.ಕ).

**(ಪ್ರತಿವಾದಿಯ ಪರವಾಗಿ ಶ್ರೀ ಎ.ಆರ್.ಎನ್ ಹಾಗೂ ಶ್ರೀ ಎಸ್.ಜಿ.,ವಕೀಲರು)**

*****

**ಮಧ್ಯಂತರ ಅರ್ಜಿ ಸಂಖ್ಯೆ 3 ರ ಪಕ್ಷಗಾರರು**

**ಅರ್ಜಿದಾರರು:–** ಶಂಭು ಈಶ್ವರ ಗೌಡ ಹಾಗೂ ಇತರರು,

**(ಅರ್ಜಿದಾರರ ಪರವಾಗಿ ಶ್ರೀ ಆರ್.ಎಮ್.ಬಿ., ವಕೀಲರು)**

**–ವಿರುದ್ಧ–**

**ಎದುರುದಾರರು:–** ಮಂಜು ಗೋವಿಂದ ಗೌಡ,

**(ಎದುರುದಾರರ ಪರವಾಗಿ ಶ್ರೀ ಎ.ಆರ್.ಎನ್ ಹಾಗೂ ಶ್ರೀ ಎಸ್.ಜಿ.,ವಕೀಲರು)**

*****

**–: ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ :–**

ಪ್ರಸ್ತುತ ದಾವೆಯನ್ನು ವಾದಿಯರು, ಪ್ರತಿವಾದಿಯ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1, 2 ಹಾಗೂ 4 ರಡಿಯಲ್ಲಿ ಸಲ್ಲಿಸಿ, ಈ ದಾವೆ ನಿಖಾಲೆಯಾಗುವವರೆಗೆ ಪ್ರತಿವಾದಿಯು ವಾದಿಯರ ದಾವಾ ಸ್ಥಳಗಳ ಅನನ್ಯ ಕಬ್ಜಾ ಭೋಗ್ವಟೆಗೆ ಆತಂಕಿಸದಂತೆ ಹಾಗೂ ಗಡಿಕಲ್ಲುಗಳನ್ನು ನಾಶಪಡಿಸದಂತೆ ಮತ್ತು ದಾವಾ ಸ್ಥಳಗಳ ಸುತ್ತಲಿರುವ ಬೇಲಿಯನ್ನು ಕಡಿದು ನಾಶಮಾಡಿ ದಾವಾ ಸ್ಥಳಗಳನ್ನು ಅತಿಕ್ರಮಿಸದಂತೆ ಪ್ರತಿವಾದಿಯ ವಿರುದ್ಧ ಹಾಗೂ ತಮ್ಮ ಪರವಾಗಿ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡಬೇಬೇಕೆಂದು ಕೋರಿಕೊಂಡಿರುತ್ತಾರೆ.

**-:ದಾವಾ ಸ್ಥಳಗಳ ವಿವರ:-**

ಹೊನ್ನಾವರ ತಾಲೂಕಿನ ಕೆಳಗಿನೂರು ಗ್ರಾಮದ ಸರ್ವೇ ನಂ. 61/9 ರ ಕ್ಷೇತ್ರ 0-3-4, ಸರ್ವೇ ನಂ. 61/13 ರ ಕ್ಷೇತ್ರ 0-1-08, ಸರ್ವೇ ನಂ. 61/18 ರ ಕ್ಷೇತ್ರ 0-7-8, ಸರ್ವೇ ನಂ. 42/2 ರ ಕ್ಷೇತ್ರ 0-6-0, ಸರ್ವೇ ನಂ. 61/7 ರ ಕ್ಷೇತ್ರ 0-0-8, ಸರ್ವೇ ನಂ. 40/2 ರ ಕ್ಷೇತ್ರ 0-04-0, ಸರ್ವೇ ನಂ. 15/5 ರ ಕ್ಷೇತ್ರ 0-4-08, ಸರ್ವೇ ನಂ. 10/2 ರ ಕ್ಷೇತ್ರ 0-5-08, ಸರ್ವೇ ನಂ. 61/03 ರ ಕ್ಷೇತ್ರ 0-3-10, ಸರ್ವೇ ನಂ. 61/02 ರ ಕ್ಷೇತ್ರ 0-7-0, ಸರ್ವೇ ನಂ. 61/8 ರ ಕ್ಷೇತ್ರ 0-19-0, ಸರ್ವೇ ನಂ. 4/8 ರ ಕ್ಷೇತ್ರ 1-9-0 ಹಾಗೂ ಸರ್ವೇ ನಂ. 4/3 ರ ಕ್ಷೇತ್ರ 0-4-02 ರ ಸ್ಥಳಗಳು ದಾವಾ ಸ್ಥಳಗಳಾಗಿರುತ್ತವೆ.

**2. ಮಧ್ಯಂತರ ಅರ್ಜಿ ಸಂಖ್ಯೆ 3 ರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ :-**

ವಾದಿಯರು ಅರ್ಜಿಗೆ ಪೂರಕವಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ, ವಾದಿಯರ ತಂದೆಯಾದ ಈಶ್ವರ ಬಿನ್ ಶಂಭು ಗೌಡರವರು ದಾವಾ ಸ್ಥಳಗಳನ್ನು ಖಂಡಿತ ಕ್ರಯಕ್ಕೆ ಪಡೆದುಕೊಂಡಿದ್ದು ಇರುತ್ತದೆ. ಆದ್ದರಿಂದ, ದಾವಾ ಸ್ಥಳಗಳು ವಾದಿಯರ ಅವಿಭಕ್ತ ಕುಟುಂಬದ ಸಾಮಾಯಿಕ ಕಬ್ಜಾ ಭೋಗ್ವಟೆಯಲ್ಲಿರುತ್ತವೆ. ತದನಂತರ ವಾದಿಯರ ಪೂರ್ವಜರು ದಾವಾ ಸ್ಥಳಗಳ ಕುರಿತಾಗಿ ಹೊನ್ನಾವರ ಭೂ ನ್ಯಾಯ ಮಂಡಳಿಗೆ ನಮೂನೆ-7 ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. ತದನಂತರ ವಿಚಾರಣೆ ನಡೆಸಿದ ಭೂ ನ್ಯಾಯ ಮಂಡಳಿಯು ವಾದಿಯರ ಪೂರ್ವಜರಿಗೆ ದಾವಾ ಸ್ಥಳಗಳ ಕುರಿತಾಗಿ ಅಧಿಬೋಗದಾರ ಹಕ್ಕನ್ನು ಮಂಜೂರು ಮಾಡಿದ್ದು ಇರುತ್ತದೆ. ಅಂದಿನಿಂದಲೂ ದಾವಾ ಸ್ಥಳಗಳ ಕಬ್ಜಾ ಭೋಗ್ವಟೆಯನ್ನು ವಾದಿಯರ ಕುಟುಂಬದವರು ಮಾಡಿಕೊಂಡು ಬಂದಿರುತ್ತಾರೆ. ಆದ್ದರಿಂದ, ಪ್ರತಿವಾದಿಗೆ ದಾವಾ ಸ್ಥಳದಲ್ಲಿ ಯಾವುದೇ ಹಕ್ಕು ವ ಸ್ವಾಮಿತ್ವ ಇರುವುದಿಲ್ಲ. ಹೀಗಿದ್ದರೂ ಸಹ ಪ್ರತಿವಾದಿಯು ವಾದಿಯರ ದಾವಾ ಸ್ಥಳಗಳ ಕಬ್ಜಾ

ಭೋಗ್ವಟೆಗೆ ಆತಂಕಪಡಿಸಿದ್ದು ಇರುತ್ತದೆ. ಆದ್ದರಿಂದ, ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

**3.** ಸದರಿ ಅರ್ಜಿಗೆ ಪ್ರತಿವಾದಿ ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿ, ಹೇಳುವುದೇನೆಂದರೆ, ವಾದಿಯರು ಕೇವಲ ಈ ಪ್ರತಿವಾದಿಯನ್ನು ಸತಾಯಿಸುವ ದುರುದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಯರು ದಾವಾ ಸ್ಥಳಗಳ ಕಬ್ಜಾ ಭೋಗ್ವಟೆಯಲ್ಲಿ ಇರುವುದಿಲ್ಲ ಹಾಗೂ ಗಣಪತಿ ವಿಷ್ಣು ಹೆಗಡೆ ಮತ್ತು ತಿಮ್ಮಣ್ಣ ವಿಷ್ಣು ಹೆಗಡೆಯವರು ಸದರಿ ದಾವಾ ಸ್ಥಳಗಳ ಮೂಲ ಮಾಲೀಕರಾಗಿರುತ್ತಾರೆ. ಈ ಪ್ರತಿವಾದಿಯು ದಾವಾ ಸ್ಥಳಗಳ ಸ್ವಲ್ಪ ಕ್ಷೇತ್ರಗಳಲ್ಲಿ ಗೇಣಿದಾರನಾಗಿ ಸಾಗುವಳಿ ಮಾಡುತ್ತಾ ಬಂದಿದ್ದರಿಂದ, ಸದರಿ ಸ್ವತ್ತುಗಳು ಈ ಪ್ರತಿವಾದಿಯ ಕಬ್ಜಾ ಭೋಗ್ವಟೆಯಲ್ಲಿರುತ್ತವೆ. ಮುಂದುವರೆದು, ಸದರಿ ದಾವಾ ಸ್ವತ್ತುಗಳ ಮೂಲ ಮಾಲೀಕರಾದ ಗಣಪತಿ ವಿಷ್ಣು ಹೆಗಡೆಯವರು ವಾದಿಯರ ತಂದೆಯ ವಿರುದ್ಧ ಮೂಲ ದಾವಾ ಸಂಖ್ಯೆ-86/1971 ನ್ನು ದಾಖಲಿಸಿದ್ದು, ಸದರಿ ದಾವೆಯು ದಿನಾಂಕ 02-11-1971 ರಂದು ಡಿಕ್ರಿ ಆಗಿದ್ದು ಇರುತ್ತದೆ.

**4.** ಪ್ರತಿವಾದಿಯು ಮುಂದುವರೆದು ಹೇಳುವುದೇನೆಂದರೇ, ತದನಂತರ ಗಣಪತಿ ವಿಷ್ಣು ಹೆಗಡೆ ಮತ್ತು ತಿಮ್ಮಣ್ಣ ವಿಷ್ಣು ಹೆಗಡೆಯವರು WP No. 19201/1981 ನ್ನು ದಾಖಲಿಸಿ ಭೂ ನ್ಯಾಯ ಮಂಡಳಿಯ ಆದೇಶವನ್ನು ಪ್ರಶ್ನಿಸಿದ್ದು ಇರುತ್ತದೆ. ಸದರಿ WP No. 19201/1981 ರಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ಭೂ ನ್ಯಾಯ ಮಂಡಳಿಯ ಆದೇಶವನ್ನು ತಿರಸ್ಕೃತಗೊಳಿಸಿದ್ದು ಇರುತ್ತದೆ. ತದನಂತರ ವಾದಿಯರು WP No. 23409/2018 ನ್ನು ದಾಖಲಿಸಿ ಹೊನ್ನಾವರ ಭೂ ನ್ಯಾಯ ಮಂಡಳಿಯ ಆದೇಶವನ್ನು ಪ್ರಶ್ನಿಸಿದ್ದು ಇರುತ್ತದೆ. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ಸದರಿ WP No. 23409/2018 ನ್ನು ವಿಚಾರಣೆ ನಡೆಸಿ, ದಿನಾಂಕ

25/07/2025 ರಂದು ಸದರಿ ಅರ್ಜಿಯನ್ನು ವಜಾಗೊಳಿಸಿದ್ದು ಇರುತ್ತದೆ. ಆದ್ದರಿಂದ, ವಾದಿಯರಿಗೆ ದಾವಾ ಸ್ಥಳದಲ್ಲಿ ಯಾವುದೇ ಹಕ್ಕು ಯಾ ಸ್ವಾಮಿತ್ವ ಇರುವುದಿಲ್ಲ. ಆದ್ದರಿಂದ, ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

5. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ದಾವೆಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಸದರಿ ದಾಖಲೆಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯಕ್ಕೆ ಈ ಅರ್ಜಿಗಳ ನಿರ್ಧರಣೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

**-:ಅಂಶಗಳು:-**

1. ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ವಾದಿಯರು ತಂದಿರುತ್ತಾರೆಯೇ?
2. ದಾವೆಯಲ್ಲಿ ಅನುಕೂಲತೆಯ ಒಲವು ತಮ್ಮ ಪರ ಇದೆ ಎಂದು ವಾದಿಯರು ರುಜುವಾತುಪಡಿಸುವರೇ?
3. ಅರ್ಜಿಯನ್ನು ಪುರಸ್ಕರಿಸದಿದ್ದರೇ ತಮಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ವಾದಿಯರು ರುಜುವಾತುಪಡಿಸುವರೇ?
4. ಯಾವ ಆದೇಶ?

6. ಉಭಯ ಪಕ್ಷಗಾರರ ವಾದವನ್ನು ಆಲಿಸಿ, ದಾವೆಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಮುಂದಿನಂತೆ ಉತ್ತರಿಸಲಾಗಿದೆ.

**ಅಂಶ ಸಂಖ್ಯೆ-1. ನಕಾರಾತ್ಮಕವಾಗಿ**
**ಅಂಶ ಸಂಖ್ಯೆ-2. ನಕಾರಾತ್ಮಕವಾಗಿ**
**ಅಂಶ ಸಂಖ್ಯೆ-3. ನಕಾರಾತ್ಮಕವಾಗಿ**
**ಅಂಶ ಸಂಖ್ಯೆ-4. ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಗಾಗಿ,**

*****

## -: ಕಾರಣಗಳು :-

7. **ಅಂಶ ಸಂಖ್ಯೆ 1** :- ವಾದಿಯರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಪ್ರತಿವಾದಿಯು, ವಾದಿಯರ ದಾವಾ ಸ್ಥಳಗಳ ಅನನ್ಯ ಕಬ್ಜಾ ಭೋಗ್ವಟೆಗೆ ಆತಂಕಪಡಿಸುತ್ತಿದ್ದಾರೆ ಎಂಬುದಾಗಿ ಹೇಳಿರುತ್ತಾರೆ. ಆದ್ದರಿಂದ, ವಾದಿಯರ ಹಕ್ಕನ್ನು ಕಾಪಾಡುವ ದೃಷ್ಟಿಯಿಂದ ನ್ಯಾಯಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆ ಪರಿಹಾರವನ್ನು ತಮ್ಮ ಪರವಾಗಿ ಹೊರಡಿಸಬೇಕೆಂದು ಕ್ಲೇಮನ್ನು ಮಾಡಿರುತ್ತಾರೆ.

8. ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡುವ ಪ್ರಮುಖ ಉದ್ದೇಶವು ಪಕ್ಷಗಾರರಿಗೆ ನೀಡುವಂತ ಕಾನೂನು ಬದ್ಧ ಹಕ್ಕುಗಳು ಮತ್ತು ಸದರಿ ಹಕ್ಕುಗಳನ್ನು ಸಂಬಂಧಿಸುವ ವ್ಯಾಜ್ಯಗಳು ಸಂಪೂರ್ಣವಾಗಿ ತೀರ್ಮಾನವಾಗುವವರೆಗೆ ಸ್ವತ್ತನ್ನು ಯಾಥಾಸ್ಥಿತಿಯಲ್ಲಿ ಕಾಪಾಡುವುದು. ತಾತ್ಕಾಲಿಕ ನಿರ್ಭಂಧಕಾಜ್ಞೆ ಅರ್ಜಿಯನ್ನು ತೀರ್ಮಾನಿಸುವಾಗ, ನ್ಯಾಯಾಲಯವು ಸದರಿ ನಿರ್ಭಂಧಕಾಜ್ಞೆ ಆದೇಶವನ್ನು ನೀಡಿರುವುದರಿಂದ ಯಾವ ರೀತಿಯ ಪರಿಣಾಮಗಳು ಪಕ್ಷಗಾರರ ಮೇಲಿನ ಹಿತಾಸಕ್ತಿಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ ಎಂಬುದನ್ನು ಪರಿಗಣಿಸುವುದು ಅವಶ್ಯವಾಗಿರುತ್ತದೆ. ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶವು ನ್ಯಾಯಸಮ್ಮತವಾದ ಪರಿಹಾರವಾಗಿದ್ದು, ಸದರಿ ಪರಿಹಾರವನ್ನು ನೀಡುವುದು ನ್ಯಾಯಾಲಯದ ವಿವೇಚನಾತ್ಮಕವಾದ ಅಧಿಕಾರವಾಗಿರುತ್ತದೆ. ಆದರೆ ಸದರಿ ವಿವೇಚನಾತ್ಮಕ ಅಧಿಕಾರವನ್ನು ನ್ಯಾಯಾಲಯವು ನಿರಂಕುಶ ರೀತಿಯಲ್ಲಿ ಚಲಾಯಿಸುವಂತಹದ್ದಾಗಿರುವುದಿಲ್ಲ. ಅಂದರೆ ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡಬೇಕಾದರೆ ವಾದಿಯರು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿರುವರೇ? ಅನುಕೂಲತೆಯ ಒಲವು ತನ್ನ ಪರವಾಗಿ ಇದೆಯೇ? ಮತ್ತು ಅರ್ಜಿಯನ್ನು ವಜಾಗೊಳಿಸುವುದರಿಂದ ತನಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ? ಎಂಬುದನ್ನು ನಿರೂಪಿಸಬೇಕಾಗಿರುತ್ತದೆ. ಪ್ರಸ್ತುತ ಅಂಶದಲ್ಲಿ ಈ

ನ್ಯಾಯಾಲಯವು ವಾದಿಯರ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ನ್ಯಾಯಾಲಯಕ್ಕೆ ತಂದಿರುತ್ತಾರೆಯೇ ಎನ್ನುವ ಅಂಶವನ್ನು ಪರಿಗಣಿಸಲು ಮುಂದಾಗಿರುತ್ತದೆ. ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆ ಎಂದರೆ ನ್ಯಾಯಾಲಯಕ್ಕೆ ವಾದಿಯು ತಂದಿರುವ ವ್ಯಾಜ್ಯದಲ್ಲಿ ತಿರುಳಿದ್ದು, ಸದರಿ ವ್ಯಾಜ್ಯವನ್ನು ಸದುದ್ದೇಶದಿಂದ ಮಾಡಿದ್ದು, ವಾದಿಯರ ವ್ಯಾಜ್ಯವು ವಿಚಾರಣೆಗೆ ಯೋಗ್ಯವಾಗಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾಗಬೇಕಾಗುತ್ತದೆ. ಮುಂದುವರಿದು, ವಾದಿಯರು ಈ ನ್ಯಾಯಾಲಯದಿಂದ ಅಂತಿಮ ಪರಿಹಾರವನ್ನು ಪಡೆದುಕೊಳ್ಳುವ ಸಂಭವವಿರುತ್ತದೆ ಎನ್ನುವ ವಿಚಾರವು ಸಹ ಮೊದಲ ನೋಟಕ್ಕೆ ಕಾಣಿಸಬೇಕಾಗಿರುವುದು ಅವಶ್ಯವಿರುತ್ತದೆ. ಈ ಹಂತದಲ್ಲಿ ವಾದಿಯರು ತಮ್ಮ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಇದೆ ಎನ್ನುವುದನ್ನು ಈ ಹಂತದಲ್ಲಿ ತೋರ್ಪಡಿಸುವ ಹೊಣೆಗಾರಿಕೆ ವಾದಿಯರ ಮೇಲಿರುತ್ತದೆ.

9. ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ನ್ಯಾಯಾಲಯವು ವಾದಿಯರು ಸಲ್ಲಿಸಿರುವ ಅರ್ಜಿ ಮತ್ತು ಪ್ರಾರ್ಥಿಸಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೇ ಎಂಬುದನ್ನು ನಿರ್ಣಯಿಸಬೇಕಾಗಿರುತ್ತದೆ. ವಾದಿಯರು ಕೇವಲ ಆರೋಪಣೆಯನ್ನು ಮಾಡುವುದರಿಂದ ನ್ಯಾಯಾಲಯದಿಂದ ಆದೇಶವನ್ನು ಪಡೆಯಲು ಅರ್ಹನಾಗಿರುವುದಿಲ್ಲ. ಅದೇ ರೀತಿ ತನ್ನ ಆರೋಪಣೆಗೆ ಪೂರಕವಾದ ಮೇಲ್ನೋಟಕ್ಕೆ ಸಮ್ಮತವಾದ ಪುರಾವೆಗಳನ್ನು ಹಾಜರುಪಡಿಸಬೇಕಾಗಿರುತ್ತದೆ.

10. ಪ್ರಸ್ತುತ ಪ್ರಕರಣದಲ್ಲಿ ವಾದಿಯರು ತಮ್ಮ ಕ್ಲೇಮಿನ ಸಮರ್ಥನೆಗಾಗಿ ಕ್ರಯಪತ್ರ, ದಾವಾ ಸ್ಥಳದ ಪಹಣಿ ಪತ್ರಿಕೆಗಳು, ವಂಶವೃಕ್ಷ , ನಮೂನೆ-7 ರ ಪ್ರತಿ, ನಮೂನೆ-10 ರ ಪ್ರತಿ ಹಾಗೂ ಭೂ ನ್ಯಾಯ ಮಂಡಳಿಯ ಆದೇಶದ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

11. ವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ಮಾನ್ಯ ನ್ಯಾಯಾಲಯವು ಕೂಲಂಕೂಷವಾಗಿ ಪರಿಶೀಲಿಸಿದೆ. ಅವುಗಳೆಂದರೇ,

ದಾವಾ ಸ್ಥಳಗಳ ಪ್ರಸ್ತುತ ಪಹಣಿ ಪತ್ರಿಕೆಗಳ ಕಾಲಂ. ನಂ.9 ರಲ್ಲಿ ಗಣಪತಿ ವಿಷ್ಣು ಹೆಗಡೆ ಹಾಗೂ ತಿಮ್ಮಣ್ಣ ವಿಷ್ಣು ಹೆಗಡೆಯವರ ಹೆಸರುಗಳು ನಮೂದಾಗಿರುವುದು ಕಂಡು ಬರುತ್ತದೆ. ಆದರೆ, ಸದರಿ ದಾವಾ ಸ್ಥಳಗಳ ಪಹಣಿ ಪತ್ರಿಕೆಗಳಲ್ಲಿ ವಾದಿಯರ ಹೆಸರುಗಳು ನಮೂದಾಗಿದ್ದು ಇರುವುದಿಲ್ಲ. ಅದಾಗ್ಯೂ, ವಾದಿಯರು ದಾವಾ ಸ್ಥಳಗಳ ಕುರಿತಾಗಿ 1946 ನೇ ಸಾಲಿನ ಕ್ರಯಪತ್ರವನ್ನು ಹಾಜರುಪಡಿಸಿರುತ್ತಾರೆ.

**12.** ಪ್ರತಿವಾದಿಯು ತನ್ನ ಕ್ಲೇಮಿನ ಸಮರ್ಥನೆಗಾಗಿ ಮೂಲ ದಾವಾ ನಂ.86/1971 ರ ಡಿಕ್ರಿ ಪ್ರತಿ, WP No.19201/1981 ರ ಆದೇಶದ ಪ್ರತಿ, WP No. 23409/2018 ರ ಆದೇಶದ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

**13.** ಪ್ರತಿವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಮಾನ್ಯ ನ್ಯಾಯಾಲಯವು ಕೂಲಂಕೂಷವಾಗಿ ಪರಿಶೀಲಿಸಿದೆ. ಅವುಗಳೆಂದರೇ,

ಮೂಲ ದಾವಾ ನಂ.86/1971 ರಲ್ಲಿ ಮಾನ್ಯ ನ್ಯಾಯಾಲಯವು ವಾದಿಯರ ತಂದೆಯ ವಿರುದ್ಧ ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ತೀರ್ಪನ್ನು ನೀಡಿ ಡಿಕ್ರಿ ನೀಡಿದ್ದು ಕಂಡು ಬರುತ್ತದೆ. WP No.19201/1981, ರ ಆದೇಶದಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ದಾವಾ ಜಂಪ್ರಾ ನಂ. 1 ರಿಂದ 3 ಹಾಗೂ 5 ರಿಂದ 13 ರ ಸ್ಥಳಗಳ ಕುರಿತಾಗಿ ಭೂ ನ್ಯಾಯ ಮಂಡಳಿಯ ಆದೇಶವನ್ನು ತಿರಸ್ಕೃತ ಮಾಡಿದ್ದು ಇರುತ್ತದೆ. WP No.23409/2018 ರಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ಸದರಿ ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ವಾದಿಯರು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ್ದು ಇರುತ್ತದೆ.

**14.** ವಾದಿಯರ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಿದ ನಂತರ, ನ್ಯಾಯಾಲಯವು ಪ್ರಸ್ತುತ ಅರ್ಜಿಯನ್ನು ತೀರ್ಮಾನಿಸುವ ಕಾರಣಕ್ಕಾಗಿ, ಪಕ್ಷಗಾರರು ಮಧ್ಯಂತರ ಅರ್ಜಿಯ ಮೇಲೆ

ಸಲ್ಲಿಸಿರುವ ವಾದಾಂಶಗಳು ಮತ್ತು ಹಾಜರುಪಡಿಸಿರುವ ದಸ್ತಾವೇಜುಗಳನ್ನು ಕೂಲಂಕೂಷವಾಗಿ ಪರಿಶೀಲಿಸಲಾಯಿತು. ಪ್ರಸ್ತುತ ಪ್ರಕರಣದಲ್ಲಿ ವಾದಿಯರು ತಮ್ಮ ವಾದ ಪತ್ರದಲ್ಲಿ ಹೇಳಿಕೊಂಡಿರುವ ದಾವಾ ಸ್ಥಳದ ಸ್ವಾಧೀನತೆಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದಾಗ್ಯೂ, ದಾವಾ ಸ್ಥಳಗಳ ಪಹಣಿ ಪತ್ರಿಕೆಗಳಲ್ಲಿ ಕಾಲಂ. ನಂ. 9 ರಲ್ಲಿ ಗಣಪತಿ ವಿಷ್ಣು ಹೆಗಡೆ ಹಾಗೂ ತಿಮ್ಮಣ್ಣ ವಿಷ್ಣು ಹೆಗಡೆಯವರ ಹೆಸರುಗಳು ನಮೂದಾಗಿದ್ದು ಇರುತ್ತದೆ. ಈ ಹಂತದಲ್ಲಿ ಸದರಿ ದಾವಾ ಸ್ವತ್ತಿನ ಕುರಿತಾಗಿ ವಾದಿ ಮತ್ತು ಪ್ರತಿವಾದಿಯರ ಹಕ್ಕುಗಳನ್ನು ಗುರುತಿಸಲು ಪೂರ್ಣ ಪ್ರಮಾಣದ ವಿಚಾರಣೆ ನಡೆಯುವುದು ಅವಶ್ಯಕವಾಗಿದೆ ಎಂಬುದು ಮಾನ್ಯ ನ್ಯಾಯಾಲಯಕ್ಕೆ ತಿಳಿಯುತ್ತದೆ. ಪ್ರಮುಖವಾಗಿ ಈ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನೋಡಿದ ನಂತರ ವಾದಿಯರು ಹೂಡಿರುವ ಈ ದಾವೆಯು ಮೇಲ್ನೋಟಕ್ಕೆ ಸಮ್ಮತವಾದ ದಾವೆ ಅಲ್ಲವೆಂದು ಮಾನ್ಯ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ.

15. ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯವು **ಗಂಗೂಬಾಯಿ ಬಾಬ್ಲಿಯಾ ಚೌದ್ರಿ ವಿರುದ್ಧ ಸೀತಾರಾಮ್ ಬಾಲ್ ಚಂದ್ರ ಸುಕ್ತಾನ್ಕರ್** (**AIR**–1983–**SC**–742) ಪ್ರಕರಣದಲ್ಲಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆಯಲು ವಾದಿಯರ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ರುಜುವಾತುಪಡಿಸುವುದು ಅವಶ್ಯವಿದ್ದು, ವಾದಿಯರು ಒಂದು ವೇಳೆ ಸದರಿ ಅಂಶವನ್ನು ನಿರೂಪಿಸಲು ವಿಫಲನಾದರೆ ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆಯಲು ಅರ್ಹನಿರುವುದಿಲ್ಲ ಎಂದು ಹೇಳಿರುತ್ತದೆ.

16. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲವು **ಗೌರಿಶಂಕರ ಸ್ವಾಮಿಗಳು ವಿರುದ್ಧ ಸಿದ್ಧಗಂಗಾ ಮಠ** (**ILR**–1989–**Karnataka**–1701) ಪ್ರಕರಣದಲ್ಲೂ ಸಹ ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯವು ಮೇಲಿನ ತೀರ್ಪಿನಂತೆ ಹೇಳಿರುತ್ತದೆ. ಸದರಿ ತೀರ್ಪುಗಳನ್ನು ಪ್ರಸ್ತುತ ಪ್ರಕರಣಕ್ಕನ್ವಯಿಸಿ ನೋಡಲಾಗಿ ವಾದಿಯರು ಪ್ರಸ್ತುತ ಪ್ರಕರಣದಲ್ಲಿ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು

ತೋರ್ಪಡಿಸಲು ವಿಫಲನಾಗಿರುವ ಕಾರಣ ಪ್ರಸ್ತುತ ತೀರ್ಪುಗಳನ್ವಯ ವಾದಿಯರು ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದು ಈ ನ್ಯಾಯಾಲಯವು **ಅಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

17. **ಅಂಶ ಸಂಖ್ಯೆ 2**:- ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆದುಕೊಳ್ಳಲು ವಾದಿಯರು ತಾತ್ಕಾಲಿಕ ನಿರ್ಬಂಧಕಾಜ್ಞೆಯ 2ನೇ ನಿಯಮವಾದ ಅನುಕೂಲತೆಯ ಒಲವು ತಮ್ಮ ಪರವಾಗಿದೆ ಎಂದು ನಿರೂಪಿಸುವುದು ಅವಶ್ಯವಿರುತ್ತದೆ. ಅನುಕೂಲತೆಯ ಒಲವು ಎಂದರೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯರ ಪರವಾಗಿ ನೀಡದೇ ಇರುವುದರಿಂದ ವಾದಿಯರಿಗೆ ಹೆಚ್ಚಿನದಾಗಿ ಕೇಡು, ಶ್ರಮ ಮತ್ತು ಅನಾನುಕೂಲತೆಯಾಗುವುದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ವಾದಿಯರು ಅನುಕೂಲತೆಯ ಒಲವು ತಮ್ಮ ಪರವಾಗಿದೆ ಎಂದು ಈ ನ್ಯಾಯಾಲಯಕ್ಕೆ ತೋರ್ಪಡಿಸಿರುತ್ತಾರೆಯೇ ಎನ್ನುವುದು ನಿರ್ಣಯಿಸತಕ್ಕಂತಹ ಅಂಶವಾಗಿರುತ್ತದೆ.

18. ಮಾನ್ಯ ನ್ಯಾಯಾಲಯವು ಪ್ರಸ್ತುತ ಅರ್ಜಿಯನ್ನು ತೀರ್ಮಾನಿಸುವ ಕಾರಣಕ್ಕಾಗಿ, ಪಕ್ಷಗಾರರು ಮಧ್ಯಂತರ ಅರ್ಜಿಯ ಮೇಲೆ ಸಲ್ಲಿಸಿರುವ ವಾದಾಂಶಗಳು ಮತ್ತು ಹಾಜರುಪಡಿಸಿರುವ ದಸ್ತಾವೇಜುಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದ ನಂತರ ಕಂಡು ಬರುವುದೇನೆಂದರೆ, ವಾದಿಯರ ಹೆಸರು ದಾವಾ ಸ್ಥಳದ ಕಬ್ಜಾ ಕಾಲಂನಲ್ಲಿ ನಮೂದಾಗದೇ ಇರುವುದರಿಂದ, ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯರ ಪರವಾಗಿ ನೀಡಿದ್ದೇ ಆದಲ್ಲಿ, ಅದರಿಂದ ಪ್ರತಿವಾದಿಗೆ ಹೆಚ್ಚಿನ ಕೇಡು, ಶ್ರಮ ಮತ್ತು ಅನಾನುಕೂಲತೆಯಾಗುತ್ತದೆಂದು ಹಾಗೂ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯರಿಗೆ ನೀಡದೆ ಇರುವುದರಿಂದ ವಾದಿಯರಿಗೆ ಅಷ್ಟಾಗಿ ಕೇಡು, ಶ್ರಮ ಹಾಗೂ ಅನಾನುಕೂಲತೆಯಾಗುವುದಿಲ್ಲವೆಂದು ಅಭಿಪ್ರಾಯಪಡುತ್ತಾ, ಈ ನ್ಯಾಯಾಲಯವು ವಾದಿಯರು ಅನುಕೂಲತೆಯ ಒಲವು ತಮ್ಮ ಪರವಾಗಿದೆ ಎಂದು ನಿರೂಪಿಸಲು ವಿಫಲರಾಗಿದ್ದಾರೆಂದು **ಅಂಶ ಸಂಖ್ಯೆ 2 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

19. **<u>ಅಂಶ ಸಂಖ್ಯೆ 3</u>** :- ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆಯಲು ವಾದಿಯರು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯು ತಮ್ಮ ಪರವಾಗಿದೆ ಎಂದು ಮತ್ತು ಅನುಕೂಲತೆಯ ಒಲವು ತಮ್ಮ ಪರವಾಗಿದೆ ಎಂದು ನಿರೂಪಿಸುವುದರ ಜೊತೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ತಮ್ಮ ಪರವಾಗಿ ನೀಡದಿದ್ದರೆ ತಮಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆ ಎಂದು ನಿರೂಪಿಸುವುದು ಅವಶ್ಯವಾಗುತ್ತದೆ. ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದರೆ, ವಾದಿಯರಿಗೆ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶವನ್ನು ನೀಡದೆ ಹೋದರೆ ಅವರಿಗಾಗುವ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯನ್ನು ಹಣದ ರೂಪದಲ್ಲಾಗಲೀ ಅಥವಾ ಇನ್ನಾವುದೇ ರೂಪದಲ್ಲಾಗಲಿ ನೀಡಿ ಸರಿಪಡಿಸಲಾಗದು ಎನ್ನುವ ಸಂದರ್ಭವಿದ್ದರೆ, ಅಂತಹ ಸಂದರ್ಭವನ್ನು ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದು ಹೇಳಬಹುದು. ಈ ನ್ಯಾಯಾಲಯವು ಒಂದು ಮತ್ತು ಎರಡನೇ ಅಂಶಗಳನ್ನು ಚರ್ಚಿಸುವ ಕಾಲಕ್ಕೆ ವಾದಿಯರು ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಮತ್ತು ಅನುಕೂಲತೆಯ ಒಲವು ತಮ್ಮ ಪರವಾಗಿದೆ ಎಂದು ನಿರೂಪಿಸಲು ವಿಫಲರಾಗಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ಬಂದಿರುತ್ತದೆ.

20. ಈ ಹಂತದಲ್ಲಿ ಸದರಿ ಅಂಶವು ಪ್ರಸ್ತುತ ಅರ್ಜಿಯ ತೀರ್ಮಾನಕ್ಕೆ ಸೂಕ್ತವಲ್ಲ ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಪ್ರಸ್ತುತ ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದ ನಂತರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯರ ಪರವಾಗಿ ನೀಡುವುದರಿಂದ ಪ್ರತಿವಾದಿಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆ ಎಂದು ಹಾಗೂ ಪ್ರಸ್ತುತ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಯರಿಗೆ ಯಾವುದೇ ರೀತಿಯಲ್ಲೂ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತಾ **ಅಂಶ ಸಂಖ್ಯೆ 3 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

21. **ಅಂಶ ಸಂಖ್ಯೆ 4** :- ಈ ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

## -: ಆದೇಶ :-

ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ವಜಾ ಮಾಡಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

(ಈ ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನ ನೀಡಿದ್ದು, ಅವರು ಬೆರಳಚ್ಚು ಮಾಡಿದ ನಂತರ ತಪ್ಪುಗಳನ್ನು ಸರಿಪಡಿಸಿ, ಆ ನಂತರ ನನ್ನ ಸಹಿಯೊಂದಿಗೆ ಈ ದಿನ ಅಂದರೆ **16 ನೇ ಸೆಪ್ಟೆಂಬರ್** 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಸಹಿ ಇದೆ.

**(ಈರಣ್ಣ ಹುಣಶಿಕಟ್ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ಹೊನ್ನಾವರ.**

*****